


ಪಾಂಡಿಚೆರಿ ಬೀ ಕೀಪಿಂಗ್ ಕೋಆಪರೇಟಿವ್ ಸೊಸೈಟಿಯ ಅಧ್ಯಕ್ಷ ಬಿ. ಗೌತಮ್



ಶ್ರೀ ನರೇಶ್ ನೆಸ್ಟ್ ಪಾಂಡಿಚೆರಿಯ ಸಂಸ್ಥಾಪಕ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುಸ್ಮಿತಾ

ತೋಟದ ಬೆಳೆಗಳಾದ ತೆಂಗು, ಅಡಿಕೆ, ಬಾಳೆ, ಚಿಕ್ಕು, ಪಪ್ಪಾಯ, ಪೇರಲೆ, ದಾಳಿಂಬೆ, ನಿಂಬು, ಚೆರ್ರಿ, ಕಾಫಿ, ಏಲಕ್ಕಿ, ಗೋಡಂಬಿ ಹಾಗೂ ಮಾವು... ಈ ತೋಟಗಳಲ್ಲಿ ಆಯಾ ಋತುಮಾನಗಳಿಗೆ ಅನುಗುಣವಾಗಿ ಜೇನುಪೆಟ್ಟಿಗೆಗಳನ್ನು ಇರಿಸಿ, ಜೇನು ಸಂಗ್ರಹಿಸುವ ಕೋಯ್ಲೋತ್ತರ ನಿರ್ವಹಣೆ ಪರಿಪಾಟವು ನಮಗೆಲ್ಲರಿಗೂ ಕಲಿಕಾಯೋಗ್ಯ. ಆಹಾರ ಬೆಳೆಗಳಾದ ಮೆಕ್ಕೆಜೋಳ, ಜೋಳ, ಭತ್ತ, ಮೆಣಸು, ಎಲ್ಲ ದ್ವಿದಳ ಹಾಗೂ ಸಿರಿಧಾನ್ಯ, ಎಣ್ಣೆಕಾಳು ಬೆಳೆಗಳ ನಡುವೆ ಹಾಗೂ ವಿವಿಧ ತರಕಾರಿ ಬೆಳೆಯುವ ತಾಕುಗಳಲ್ಲಿ ಅಳವಡಿಸಿದ ಜೇನುಪೆಟ್ಟಿಗೆಗಳಲ್ಲಿ ಸಂಗ್ರಹಿಸಿದ ವಿವಿಧ ಬಗೆಯ ಹಾಗೂ ರುಚಿಯ ಜೇನುತುಪ್ಪವಿಲ್ಲಿ ಮಾರಾಟಕ್ಕೆ ಲಭ್ಯವಿದೆ.



ತೆಂಗಿನ ಚಿಪ್ಪಿನಲ್ಲಿ ಗೂಡು ಕಟ್ಟಿದ ನಸ್ರಿ ಜೇನು

ದಕ್ಷಿಣ ಭಾರತದ ಕೆಲ ಭಾಗಗಳಲ್ಲಿ ಪುಷ್ಪಕೃಷಿ ಪ್ರವರ್ಧಮಾನಕ್ಕೆ ಬಂದಿದೆ. ಸುಗಂಧರಾಜ, ಸೇವಂತಿಗೆ, ಮಲ್ಲಿಗೆ, ಗುಲಾಬಿ, ಚೆಂಡುಹೂವು, ಆಸ್ಟರ್, ಜೀನಿಯಾ, ಕಾಸ್ಮಸ್, ಬಾಟಲ್ ಬ್ರಾಷ್ ಮತ್ತು ಜಾಲಿ ಇತ್ಯಾದಿ ತೋಟಗಳಲ್ಲಿ ಜೇನುಕೃಷಿ ಕಾಣಬಹುದು. ಇದಕ್ಕಾಗಿ ಎಕರೆಗಟ್ಟಲೆ ಜಾಗ ಬೇಕಂತೇನೂ ಇಲ್ಲ. ಕೇವಲ ನಾಲ್ಕಾರು ಗುಂಟೆ ಜಮೀನಿನಲ್ಲಿ 6ರಿಂದ 8 ಜೇನುಪೆಟ್ಟಿಗೆ ಇಟ್ಟು, ಅದರಿಂದ ಸಂಗ್ರಹಿಸಲಾಗುವ ತುಪ್ಪದ ರುಚಿ... ಸವಿದವರೇ ಬಲ್ಲರು! ಹೀಗೆ ಬೇಡಿಕೆ ಆಧರಿಸಿದ ವಿವಿಧ ಹಂತಗಳ ಜೇನುಕೃಷಿಯ ಮೆರಗು ಅನುಭವಗಮ್ಯ.

ಆ್ಯಂಟಿಗೊನನ್, ಹನಿಸಕ್ಕಲ್, ಸೀಗೆ, ಮಲ್ಲಿಗೆ ಸೇರಿದಂತೆ 20ಕ್ಕೂ ಹೆಚ್ಚು ಕಾಡುಬಳ್ಳಿಗಳು ಹಾಗೂ ಔಷಧೀಯ ಸಸ್ಯಗಳು, ಹುಲ್ಲು ಮತ್ತು ಕಳೆ ಗಿಡಗಳಾದ ತುಂಬೆ, ನೆಲ್ಲಿಚಟ್ಟು, ಗರಿಕೆ, ಮುಟ್ಟಿದರೆ ಮುನಿ... ಇತ್ಯಾದಿಯನ್ನಾಧರಿಸಿ ಕೈಗೊಂಡ ಜೇನುಕೃಷಿಯು ಅಲ್ಲಿನ ಜೇನುಕೃಷಿಕರು ಸಾಧಿಸಿದ ಹಲವು ಮಜಲುಗಳ ಕೌಶಲ ಪ್ರದರ್ಶಿಸುತ್ತದೆ.

ಇವುಗಳ ಜೊತೆ 20ಕ್ಕೂ ಹೆಚ್ಚು ಮೌಲ್ಯವರ್ಧಿತ ಜೇನುತುಪ್ಪ ಆಧರಿತ ಉಪ ಉತ್ಪನ್ನಗಳನ್ನು ಅವರು ಬ್ರ್ಯಾಂಡಿಂಗ್‌ನೊಂದಿಗೆ ಮಾರುಕಟ್ಟೆಗೆ ಪರಿಚಯಿಸಿರುವುದು ಗಮನಾರ್ಹ. ಈ 'ಎಕನಾಮಿಕ್ ಜೂವಾಲಜಿ' ಈಗ ವಿಸ್ತೃತ ಅಧ್ಯಯನ ಶಾಖೆಯಾಗಿ ರೂಪುಗೊಂಡಿದೆ. ಈ ನಿಟ್ಟಿನಲ್ಲಿ ಪುದುಚೆರಿಯ ಕೃಷಿ ಹಾಗೂ ರೈತ ಕಲ್ಯಾಣ ಇಲಾಖೆ ಮತ್ತು ಹಾರ್ಟಿಕಲ್ಚರ್ ಮಿಷನ್‌ನ ನೆರವು ಗಮನಾರ್ಹ. ಇವುಗಳ ಸಹಕಾರ, ಹಣಕಾಸು ನೆರವು, ಜೇನುಕೃಷಿ ಪರಿಕರಗಳಿಗೆ ಸಹಾಯಧನ, ಜೇನು ಕುಟುಂಬ ಪೂರೈಕೆ, ಮಧುವನಗಳಲ್ಲಿ ತರಬೇತಿಯು ಅಲ್ಲಿನ ಜೇನುಕೃಷಿಕರಿಗೆ ಈ ದಿಸೆಯಲ್ಲಿ ಸಾಗಲು ಬೆನ್ನೆಲುಬಾಗಿದೆ.

ಜಿಜ್ಞಾಸೆ ಇಟ್ಟುಕೊಂಡು ಧಾರವಾಡದ ನಿಸರ್ಗ ಸಂಶೋಧನಾ ಕೇಂದ್ರ (ಎನ್.ಆರ್.ಸಿ.) ಸಹಯೋಗದಲ್ಲಿ ನಾವು 2022ರಲ್ಲಿ ಕೈಗೊಂಡ 'ಜೇನುಹುಳುವಿನ ಬದುಕು ಬವಣೆ' ಎಂಬ ಸಣ್ಣ ಸಮೀಕ್ಷೆಯು ಅನೇಕ ಕುತೂಹಲಕಾರಿ ವಿಷಯಗಳನ್ನು ತೆರೆದಿಟ್ಟಿತು. ನಮ್ಮ ಜ್ಞಾನಕ್ಷಿತಿಜಕ್ಕೆ ಸುಲಭವಾಗಿ ನಿಲುಕದ ಜೀವಜಗತ್ತಿನ ವಿಸ್ಮಯಕಾರಿ ಕೊಂಡಿಗಳು ಅತ್ಯಂತ ವೇಗವಾಗಿ ತುಂಡರಿಸುತ್ತಿರುವ ಕಳವಳಕಾರಿ ಸತ್ಯಗಳನ್ನು ಆ ಸಮೀಕ್ಷೆ ಅನಾವರಣಗೊಳಿಸಿತು.

ಆ ಸಮೀಕ್ಷೆ ಹಾಗೂ ತಜ್ಞರೊಂದಿಗಿನ ಸಮಾಲೋಚನೆಯಿಂದಾಗಿ ಧಾರವಾಡದಲ್ಲಿನ ಜೇನುಕೃಷಿಯ ಬಗ್ಗೆ ಅರಿಯುವ ಆಸಕ್ತಿ ಮೂಡಿತು. ಧಾರವಾಡದಂತಹ ಸ್ಮಾರ್ಟ್‌ಸಿಟಿ ವ್ಯಾಪ್ತಿಯಲ್ಲಿನ ಪರಿಸರಕ್ಕೆ ಮಾರಕವಾಗುವಂತಹ ಅಭಿವೃದ್ಧಿ ಕಾರ್ಯಗಳ ಹಾಗೂ ಬೆಳವಣಿಗೆಗಳ ಮಧ್ಯೆಯೂ ಜೇನುನೊಣಗಳು (ಹನೀ ಬಿ) ನೂರಾರು ಗಿಡಗಳಲ್ಲಿ, ವರ್ಷಾನುಗಟ್ಟಲೆ ಈ ಹಿಂದೆ ಬದುಕು ಕಟ್ಟಿಕೊಂಡಿದ್ದ ಪರಿ ಆಶ್ಚರ್ಯ ಮೂಡಿಸಿತು. ಅವಳಿ ನಗರದಲ್ಲಿ ಜೇನ್ನೊಣಗಳ ಮೌನ ತಪಸ್ಸು ಹೇಗೆ ವಸುಮದೊಳಗೆ ಜೀವನವನ್ನು ವಿಕಸಿಸುವಂತೆ ಮಾಡಿತ್ತು ಎಂಬುದರ ಸ್ಥೂಲ ಪರಿಚಯ ನಮಗಾಯಿತು.



ನಸ್ರಿ ಜೇನುಗೂಡು ಕಟ್ಟಿರುವ ಮಾದರಿಯೊಂದಿಗೆ ಎಪಿಐ ತಜ್ಞ ಕೃಷ್ಣಕುಮಾರ್ ಭಾಗವತ್

ರಾಣಿ ಜೇನಿನ ಆಣತಿಯಂತೆ ಸಾವಿರಾರು ಹೂವುಗಳಿಗೆ ಭೇಟಿ ನೀಡಿ, ಆಯ್ದ ಹೂವುಗಳಿಂದ ಒಂದು ಹನಿ ಮಕರಂದವನ್ನು ಇಡೀ ದಿನ ಸಂಗ್ರಹಿಸಿ ತರುವ ಜೇನ್ನೊಣಗಳು ನಿಜಕ್ಕೂ ಕಾರ್ಮಿಕರಂತೆಯೇ. ಅವುಗಳನ್ನು 'ಬ್ಯುಸಿ ಬೀ'ಗಳು ಎನ್ನಬಹುದು. ಅಗತ್ಯ ಬಿದ್ದಾಗ ನೂರಾರು ಬಾರಿ ಎಡತಾಕಿ